**ಸಾಕ್ಷಿಯನ್ನು ದಿನಾಂಕ 10.08.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಮ್.ಎನ್ ಆರ್ ವಕೀಲರಿಂದಃ

ವಾದಿಯು ಜಮೀನಿಗೆ ಸಂಬಂಧಪಟ್ಟಂತೆ ಈ ದಾವೆ ಸಲ್ಲಿಸಿರುತ್ತಾರೆ ಯಾರು ದಾವೆ ಸಲ್ಲಿಸಿರುತ್ತಾರೆಂದರೆ ವಾದಿ ಮತ್ತು ನಾನು ಸಲ್ಲಿಸಿರುತ್ತೇನೆ ಎನ್ನುವರು. ನನ್ನ ಹೆಂಡತಿಯ ಹೆಸರು ರೇವಮ್ಮ ಆಗಿರುತ್ತದೆ. ನನ್ನ ತಂದೆ ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರ ಎಂದರೆ ಸಾಕ್ಷಿದಾರರು 3 ಪಾಲು ಆಗಬೇಕೆಂದು ತಕರಾರು ಸಲ್ಲಿಸಿರುತ್ತಾರೆ ಎನ್ನುವರು. ನನ್ನ ತಂದೆಯ ತಂದೆಯ ಹೆಸರು ಗುಜ್ಜನಾಯಕ ಆಗಿರುತ್ತದೆ. ನನ್ನ ತಂದೆಯ ತಂದೆಯ ಹೆಸರು ಗುಜ್ಜಾರಿ ಆಗಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಅಕ್ಷರ ತಪ್ಪಾಗಿರುತ್ತದೆ ಎನ್ನುವರು. ನನ್ನ ತಂದೆ ಸಲ್ಲಿಸಿರುವ ತಕರಾರಿನಲ್ಲಿ ವಾದಿಯು ಸಲ್ಲಿಸಿದ ದಾವೆಯನ್ನು ವಾಜಾ ಮಾಡಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಅವರ ಲಿಖಿತ ಹೇಳಿಕೆಯಲ್ಲಿ ವಾದಪತ್ರದಲ್ಲಿ ಹೇಳಿದ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತೀರಿಕೊಂಡ ನಂತರ ನಾನು ಈ ಕೇಸಿನಲ್ಲಿ ಹೆಚ್ಚುವರಿ ತಕರಾರನ್ನು ಹಾಕಿರುವುದಿಲ್ಲ. ನನ್ನ ತಂದೆಗೆ ಒಟ್ಟು 12 ಜನ ಮಕ್ಕಳು ಇರುತ್ತಾರೆ. ಅವರಲ್ಲಿ 11 ಜನ ತೀರಿಕೊಂಡಿದ್ದು ನಾನು ಒಬ್ಬನೇ ಇರುತ್ತೇನೆ. ತೀರಿಕೊಂಡಿರುವ ನನ್ನ ತಂದೆಯ ಮಕ್ಕಳ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ಸಹೋದರ-ಸಹೋದರಿಯರ ಮಕ್ಕ ಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನನ್ನ ಒಡ ಹುಟ್ಟಿದವರ ಹೆಸರು ದೇವಮ್ಮ, ಚಾಮನಾಯಕ ಉಳಿದವರ ಹೆಸರು ಗೊತ್ತಿರುವುದಿಲ್ಲ ಎನ್ನುವರು. ನಾನು ಮತ್ತು ವಾದಿ ಚೆನ್ನಾಗಿರುತ್ತೇವೆ ಎಂದರೆ ಸರಿ. ನನ್ನ ವಕೀಲರ ಹೆಸರು ಕುಮಾರಸ್ವಾಮಿ ಆಗಿರುತ್ತದೆ. ಅವರ ಕಚೇರಿ ಮೈಸೂರಿನಲ್ಲಿ ಇರುತ್ತದೆ. ಅವರು ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಒಬ್ಬನೇ ಬಂದಿರುತ್ತೇನೆ. ನಾನು ಮತ್ತು ವಾದಿ ಸೇರಿಕೊಂಡು ಉಳಿದ ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಕರಾರಿನಲ್ಲಿ ಹೇಳಿರುವ ವಿಚಾರವನ್ನು ನಮೂದು ಮಾಡಿರುತ್ತೀರಾ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎನ್ನುವರು. ಕೋಣನಾಯಕನ ಮಗ ಕೋಣನಾಯಕ ಎಂದರೆ ನಾನು ಆಗಿರುತ್ತೇನೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಮೈಸೂರಿನಲ್ಲಿ ತಯಾರಿಸಿದ್ದು ಅದಕ್ಕೆ ನಾನು ಹೆಬ್ಬೆಟ್ಟಿನ ಸಹಿಯನ್ನು ಹಾಕಿರುತ್ತೇನೆ. ದಾವಾ ಆಸ್ತಿಗಳ ಸರ್ವೆ ನಂ. ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನುಗಳು ನನ್ನ ದೊಡ್ಡಪ್ಪ ಗುಜ್ಜನಾಯಕ ಅವರ ಹೆಸರಿನಲ್ಲಿ ಇರುತ್ತದೆ. ಆ ಬಗ್ಗೆ ನಾನು ದಾಖಲಾತಿಗಳನ್ನು

ನೋಡಿರುವುದಿಲ್ಲ. 6 ನೇ ಪ್ರತಿವಾದಿಯು ಏನು ತಕರಾರು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ಜಮೀನು ಅವರಿಗೆ ಸಂಬಂಧಿಸಿರುತ್ತವೆ ಎಂದು ತಕರಾರು ಹಾಕಿರುತ್ತಾರೆ ಎನ್ನುವರು. ದಾವಾ ಆಸ್ತಿಗಳು

ವಿಭಾಗ ಆಗಿರುವುದಿಲ್ಲವೆಂದು ನಾನು ತಿಳಿದುಕೊಂಡಿರುತ್ತೇನೆ. ನನ್ನ ತಂದೆ ವಾದಿ ಸಲ್ಲಿಸಿರುವ ದಾವೆ ವಜಾ ಆಗಬೇಕೆಂದು ತಕರಾರು ಸಲ್ಲಿಸಿದ್ದರೂ ಸಹ ನಾನು ವಾದಿಯ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.